ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ಸರ್ಕಾರದ ಉದ್ದೇಶದಂತೆ ಅವರೆಲ್ಲರನ್ನೂ ಒಟ್ಟಿಗೆ ಇಡಬೇಕೆಂದು ಮಾಡಿದ್ದೇವೆಂದು ಹೇಳಿದ್ದೀರಿ. ಅದನ್ನು ಸ್ವಾಗತಿಸುತ್ತೇನೆ. ಆದರೆ ಅವರನ್ನೇನು ಮಾಡಿದ್ದೀರೀ ಎಂದರೆ, ತಾವು ಅವರನ್ನು ಒಡೆದು ಬಿಟ್ಟಿದ್ದೀರಿ. ನನ್ನ (ಅ) ಪ್ರಶ್ನೆಗೆ ಉತ್ತರದಲ್ಲಿ ಇಲ್ಲವೆಂದು ಹೇಳಿದ್ದೀರಿ, ಆದರೆ (ಪಿ)ಗೆ ಉತ್ತರವಾಗಿ ವಿವರ ಸಂಗ್ರಹಿಸಿಲ್ಲವೆಂದು ಹೇಳಿದ್ದೀರಿ, ವಿವರ ಸಂಗ್ರಹಿಸದೇ ತಮಗೆ ಆ ಪ್ರಶ್ನೆಗೆ ಉತ್ತರ ಎಲ್ಲಿಂದ ಸಿಕ್ಕಿತು ಸ್ವಾಮಿ ?

ಶ್ರೀ ಎಲ್.ಜಿ. ಹಾವನೂರ್.—ಅನ್ಯಾಯವಾಗಿದ್ದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಒಕ್ಕಲಿಗರು ಎನ್ನುವುದರಲ್ಲಿ ರೆಡ್ಡಿಯವರನ್ನು ಸೇರಿಸುವುದು ಬೇಡವೆಂದರೆ ಆ ವಿಚಾರ ಬೇರೆ. ಸೇರಿಸಿ ಅವರೆಲ್ಲರನ್ನೂ ಬ್ಯಾಕ್‌ವರ್ಡ್ ಎಂದು ಮಾಡಿದ್ದೇವೆ, ಆ ರೀತಿ ಮಾಡಿ ಅವರಿಗೆ ಇನ್ನು ಮುಂದೆ ಎಲ್ಲೆಲ್ಲಿ ಸ್ಥಾನಮಾನ ಸಿಗಬೇಕೋ ಅದಕ್ಕೆ ವ್ಯವಸ್ಥೆ ಮಾಡಲಾಗಿದೆ. ನಾವು ಏನು ಈಗ ಹೊಸದಾಗಿ ಅವರಿಗೆ ಅನ್ಯಾಯ ಮಾಡುವುದಕ್ಕೆ ಹೋಗಿಲ್ಲ. That answer you are querrying.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ, ನಾನು ತಾಂತ್ರಿಕವಾಗಿ ಉತ್ತರ ಕೇಳುತ್ತಿದ್ದೇನೆಯೇ ಹೊರತು ಅದನ್ನು ಕೇಳುತ್ತಿಲ್ಲ. ಇಲ್ಲಿ ವಿವರಣೆಯನ್ನು ಸಂಗ್ರಹಿಸಿಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ಅದಕ್ಕೆ ವಿವರಣೆಯನ್ನು ಸಂಗ್ರಹಿಸದೇ (ಅ) ಪ್ರಶ್ನೆಗೆ ಉತ್ತರ ತಮಗೆ ಇಲ್ಲವೆಂದು ಹೇಗೆ ಬರುತ್ತದೆಂದು ಕೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ್ ಅರಸ್.—ಅವರಿಗೆ ಸಾಕಷ್ಟು ಪ್ರಾತಿನಿಧ್ಯ ಸರ್ಕಾರದಲ್ಲಿ ದೊರೆಯುತ್ತಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ; ಅದಕ್ಕಾಗಿಯೇ ಅವರಿಗೆ ಇನ್ನಷ್ಟು ಪ್ರಾತಿನಿಧ್ಯ ದೊರಕಬೇಕು ಎನ್ನುವ ಉದ್ದೇಶದಿಂದಲೇ ಬ್ಯಾಕ್‌ವರ್ಡ್ ಎಂದು ಮಾಡಿರುವುದು.

ಶ್ರೀ ಪಿ.ಎನ್. ರೆಡ್ಡಿ.—ಸ್ವಾಮಿ, ಈ ರೆಡ್ಡಿ ಜನಾಂಗದವರನ್ನು ಓಟಿಗಾಗಿ, ಸೀಟಿಗಾಗಿ ಕೆಲವರು ಲಿಂಗಾಯಿತರ ಕಮ್ಯೂನಿಟಿನಲ್ಲಿ ಮತ್ತೆ ಕೆಲವರು ಒಕ್ಕಲಿಗರ ಕಮ್ಯೂನಿಟಿನಲ್ಲಿ ಸೇರಿಸಿಕೊಂಡು ಬಿಟ್ಟಿದ್ದಾರೆ. ರೆಡ್ಡಿಗಳ ಹಾಸ್ಟಲ್‌ಗಳೇ ಬೇರೆ ಇವೆ; ಒಕ್ಕಲಿಗರ ಹಾಸ್ಟಲ್‌ಗಳೇ ಬೇರೆ ಇವೆ, ಆದುದರಿಂದ ಇನ್ನು ಮುಂದಾದರೂ ರೆಡ್ಡಿ ಜನಾಂಗಕ್ಕೆ ಬೇರೆ ಸ್ವಲ್ಪ ಹೆಚ್ಚಿನ ಪ್ರಾತಿನಿಧ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI D. DEVARAJ URS.—That I can't promise. Because, as long as they are in the main stream and when they come under the broad term Vokkaliga—whether it is Kunchitiga or marasu I can't say. Nevertheless, when some of their leaders of the community approached me at one time for a site for Hostel, a very first class site has been given to them to build the hostel.

ಶ್ರೀ ಯು.ಬಿ. ಬೋರ್ಕರ್.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಭಂಟರನ್ನು ಹರಿಜನರ ಜನಾಂಗಕ್ಕೆ ಸೇರಿಸಿ ಬಿಟ್ಟಿದ್ದೀರಿ, ಇದರಿಂದ ಹರಿಜನರಿಗೆ ಸಲ್ಲಬೇಕಾಗಿದ್ದ ಅವಕಾಶಗಳು ತಪ್ಪಿದಂತೆ ಆಗುವುದಿಲ್ಲವೆ ?

ಶ್ರೀ ಡಿ. ದೇವರಾಜ್ ಅರಸ್.—ಬೇರೆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

Progress of Family Planning Programme in the State

985. SRI K.S. KALAMARI GOWDA (Periyapatna).—Will the Minister for Health and Family Welfare be pleased to state.

the progress made in respect of Family Planning Programme in the State for the last three years (yearwise information may please be furnished)?

SRI M. MALLAPPA (Minister for Health and Family Welfare).—

The progress made in respect of the Family Welfare programme in the State for the years 1975-76, 1976-77 and 1977-78 are as follows:-

F.W Methods	1975-76		1976-77		1977-78	
	Target	Achievement	Target	Achievement	Target	Achievement
Sterilisation	139000	120671	244500	430060	300000	93971
I. U. D,	30900	27581	172000	30392	57400	23384
C. C. Users	121600	81907	212500	91508	179200	77613

ಶ್ರೀ ಕೆ.ಎಸ್. ಕಾಳಮರಿಗೌಡ.— ಸ್ವಾಮಿ, ಫ್ಯಾಮಿಲಿ ಪ್ಲಾನಿಂಗ್‌ಗೋಸ್ಕರ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ? ಮತ್ತು ಆಕ್ರಮವಾಗಿ ಒತ್ತಾಯಮಾಡಿದ ಶಸ್ತ್ರಚಿಕಿತ್ಸೆ ಎಷ್ಟು ?

ಶ್ರೀ ಎಂ. ಮಲ್ಲಪ್ಪ.—

೧೯೭೫-೭೬ ಕ್ಕೆ — ೩,೯೮,೨೭೭ ರೂಪಾಯಿಗಳು ;
೧೯೭೬-೭೭ ಕ್ಕೆ — ೧೦,೮೬,೦೦೦ ರೂ.ಗಳು ;
೧೯೭೭-೭೮ ಕ್ಕೆ — ೪,೬೭,೪೭೦ ರೂ.ಗಳು ;

ಇನ್ನು ಆಕ್ರಮವಾಗಿ ಚಿಕಿತ್ಸೆ ಮಾಡಿಲ್ಲ, ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ.ಎಸ್. ಕಾಳಮರಿಗೌಡ.— ಸ್ವಾಮಿ, ಈ ಒಂದ ಚಿಕಿತ್ಸೆ ಒತ್ತಾಯವಾಗಿ ನಡೆದಂಥ ಬಗೆಗೆ ಎಷ್ಟು ವಿಷಯಗಳು 'ಷಾ' ಆಯೋಗಕ್ಕೆ ಹೋಗಿದೆ ಸ್ವಾಮಿ ?

ಶ್ರೀ ಎಂ. ಮಲ್ಲಪ್ಪ.— ಎಷ್ಟು ಹೋಗಿದೆಯೋ ಗೊತ್ತಿಲ್ಲ. ಅದರ ಬಗ್ಗೆ ಅಂತಿಮವಾದ ವರದಿ ಬಂದ ನಂತರ ಬೇಕಾದರೆ ಮಾನ್ಯ ಸದಸ್ಯರಿಗೆ ಅಂಕಿಸಂಖ್ಯೆಗಳನ್ನು ಒದಗಿಸಲಾಗುತ್ತದೆ.

ಶ್ರೀ ಕೆ.ಎಸ್. ಕಾಳಮರಿಗೌಡ.— ಒತ್ತಾಯ ಚಿಕಿತ್ಸೆ ಮಾಡಿದವರಲ್ಲಿ ತೊಂದರೆಗೆ ಒಳಗಾದವರಿಗೆ ಏನಾದರೂ ಪರಿಹಾರ ಕೊಡಲಾಗಿದೆಯೇ? ಆ ರೀತಿ ಏನಾದರೂ ಕೊಡಲಿಕ್ಕೆ ಸರ್ಕಾರದವರು ಭರವಸೆ ಕೊಡುತ್ತಾರೆಯೇ ?

ಶ್ರೀ ಎಂ. ಮಲ್ಲಪ್ಪ.— ಅಂಥವರು ಯಾರಾದರೂ ಇದ್ದರೆ ಅವರಿಗೆ ಕಾನೂನು ರೀತ್ಯಾ ಪರಿಹಾರವನ್ನು ಒದಗಿಸಿ ಕೊಡಬೇಕಾಗಿದೆ. ಕೆಲವರಿಗೆ ಒದಗಿಸಿ ಕೊಡಲಾಗಿದೆ.

ಶ್ರೀ ಕೆ.ಎಸ್. ಕಾಳಮರಿಗೌಡ.— ೧೯೭೫-೭೬, ೧೯೭೬-೭೭, ೧೯೭೭-೭೮ ಈ ವರ್ಷಗಳಿಗೆ ಹೋಲಿಸಿದಾಗ ಅದು ಕಡಿಮೆಯಾಗಿರುವುದಕ್ಕೆ ಕಾರಣವೇನೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಪ್ಪ.— ಅದಕ್ಕೆ ಭಾರತ ಸರ್ಕಾರದವರೇ ಹೆಚ್ಚಿಗೆ ಕಾರಣ.

ಶ್ರೀ ಕೆ.ಎಂ. ತಮ್ಮಯ್ಯ — ಈ ಕುಟುಂಬ ಯೋಜನಾ ಕಾರ್ಯಕ್ರಮವು ೧೯೭೭-೭೮ ರಲ್ಲಿ ಕಡಿಮೆಯಾಗಲು ಕಾರಣವೇನು ಸ್ವಾಮಿ ?

ಶ್ರೀ ಎಂ. ಮಲ್ಲಪ್ಪ.— ಸ್ವಾಮಿ, ನಾನು ಆಗಲೇ ಉತ್ತರ ಹೇಳಿದೆ, ಅದಕ್ಕೆ ಭಾರತ ಸರ್ಕಾರದವರ ಪ್ರಚಾರವೇ ಕಾರಣವೆಂದು.

ಶ್ರೀ ಎಂ. ಶ್ರೀನಿವಾಸ್.— ಭಾರತ ಸರ್ಕಾರದವರು ಯಾವ ರೀತಿ ಅದಕ್ಕೆ ಅಡಚಣೆ ಉಂಟು ಮಾಡಿದ್ದಾರೆಂಬುದನ್ನು ತಿಳಿಸುತ್ತೀರಾ ಸ್ವಾಮಿ ?

ಶ್ರೀ ಎಂ. ಮಲ್ಲಪ್ಪ.— ಎಲ್ಲಾ ಕಡೆಯೂ ಇದರ ಬಗ್ಗೆ ಬಲವಂತ ಮಾಡಿದ್ದಾರೆ, ತೊಂದರೆ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಪ್ರಚಾರ ಮಾಡಿದ ಮೇಲೆ ಉತ್ತರದ ಗಾಳಿ ನಮ್ಮ ಕಡೆಗೆ ಸ್ವಲ್ಪ ಬೀಸಿದ ಮೇಲೆ ಸ್ವಲ್ಪ ಕಡಿಮೆಯಾಯಿತು. ಆ ಮೇಲೆಯೇ ಅದು ಸ್ವಲ್ಪ ಕಡಿಮೆಯಾಗಿದೆ. ಪ್ರಧಾನ ಮಂತ್ರಿಯವರು ಸಹ ಈಗಾಗಲೇ ತಪ್ಪೇನಾಗಿದೆ ಎಂಬುದನ್ನು ಅರಿತುಕೊಂಡು ಎಲ್ಲಾ ಕಡೆಗೂ ಒಂದು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಇದನ್ನು ಒಂದು ರಾಷ್ಟ್ರೀಯ ಸಮಸ್ಯೆಯಾಗಿ ಪರಿಗಣಿಸಿದ್ದಾರೆ, ಅದಕ್ಕಾಗಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಸಕ್ರೀಯವಾಗಿ ಎಲ್ಲರೂ ಅದರಲ್ಲಿ ಭಾಗವಹಿಸಬೇಕೆಂದು ಕರೆ ಕೊಟ್ಟಿದ್ದಾರೆ. ಇನ್ನು ಮುಂದೆ ಹಿಂದೆ ಆದ ರೀತಿಯಲ್ಲಿ ತಪ್ಪು ಆಗದಂತೆ ಕೆಲಸ ನಡೆಸಿಕೊಂಡು ಹೋಗುವ ಬಗ್ಗೆ ನಾನು ಭರವಸೆ ಕೊಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್.— ೧೯೭೭-೭೮ ರಲ್ಲಿ ಕಡಿಮೆಯಾಗುವುದಕ್ಕೆ ಭಾರತ ಸರ್ಕಾರದವರೇ ಕಾರಣವೆಂದು ಹೇಳಿದ್ದೀರಿ. ಆದರೆ ೧೯೭೬-೭೭ ರಲ್ಲಿ ತುರ್ತು ಪರಿಸ್ಥಿತಿಯ ಕಾಲದಲ್ಲಿ ೨ ಲಕ್ಷದ ಳಳಿ ೨ಎರ ಗುರಿ ಇದ್ದರೆ ಸಾಧನೆ ಮಾಡಿರುವುದು ಳ ಲಕ್ಷದ ೩೦ ಸಾವಿರ, ಅದರ ಅರ್ಥವೇನು ಸ್ವಾಮಿ ?

ಶ್ರೀ ಎಂ. ಮಲ್ಲಪ್ಪ.— ಆಗ ಒಂದು ಗುರಿ ಇತ್ತು; ಆಗ ಅದು ಆಗಿರತಕ್ಕಂಥದ್ದು,.ಅದು ತಪ್ಪು ಎಂದು ಗೊತ್ತಾದ ಮೇಲೆ ಈಗ ಸ್ವಲ್ಪ ಕಡಿಮೆಯಾಗಿದೆ ಅಷ್ಟೆ.

ಶ್ರೀ ಎಂ. ಚಂದ್ರಶೇಖರ್.— ಗುರಿಗಿಂತ ಹೆಚ್ಚು ಸಾಧನೆಯನ್ನು ಆಗ ಮಾಡಿದ್ದರು. ಅಂದರೆ ಬಲವಂತವಿಲ್ಲದಿದ್ದರೆ ಅಷ್ಟೊಂದು ಮಾಡುವುದಕ್ಕೆ ಆಗುತ್ತಿತ್ತೇ ಎಂದು ಕೇಳುತ್ತಿದ್ದೇನೆ ?

ಶ್ರಿ ಎಂ. ಮಲ್ಲಪ್ಪ.— ಆಗ ಅದಕ್ಕೆ ಹೆಚ್ಚಿನ ಪ್ರಯಾರಿಟಿ ಕೊಟ್ಟು ಮಾಡಿದ್ದರು; ಈಗ ಮಾನ್ಯ ಸದಸ್ಯರು ಅದನ್ನು ಹೆಚ್ಚಿಗೆ ಮಾಡಬೇಕೆಂದು ಅಭಿಪ್ರಾಯ ಪಡುವುದಾದರೆ ಮಾಡೋಣ.

MR SPEAKER.—Question No. 735 is held over. Now Question Hour is over.

QUESTIONS FOR ANSWERS ON THE DAY
(But not taken up)

Planned and non-planned expenditure during 1977-78

374 SRI BHIMANNA KHANDRE (Bhalki).— Will the Minister for Finance be pleased to state :—

the amout of Planned and Non Planned Expenditure incurred during the financial year 1977-78 (the information is to be furnished District wise).

SRI S.M. YAHYA (Finance Minister).— It is presumed that the Hon'ble Member desires information on Plan and Non-Plan Expenditure.

The accounts for 1977-78 have not yet been finalised by the Accountant General. However, the information on the basis of the Revised Estimates 1977-78 is furnished below—

(i) Plan Expenditure	Rs. 236.33	crores.
(ii) Non-Plan Expenditure	Rs. 569.37	crores.
Total :	Rs. 805.70	crores.

(District-wise information is not available).